# ಹೆಂಡ, ಸಾರಾಯಿ ಸಹವಾಸ..!

ಸರಕಾರವೇ ಮುಂದೆ ನಿಂತು ಎಲ್ಲೆಡೆ ಬರೆಸಿರುವ 'ಹೆಂಡ ಸಾರಾಯಿಯ ಸಹವಾಸ, ಹೆಂಡತಿ ಮಕ್ಕಳು ಉಪವಾಸ' ಎಂಬ ಉಕ್ತಿಯನ್ನು ಮುಖ್ಯಮಂತ್ರಿಯವರಿಗೆ ಈಗ ನೆನಪಿಸುವವರು ಯಾರು? ಹೊಸ ಸರಕಾರಕ್ಕೆ ಅತ್ಯುತ್ಸಾಹದಿಂದ ಆಶೀರ್ವಾದ ಮಾಡಿದ ಹಿರಿಯ ಸಾಹಿತಿಗಳು, ಸ್ವಾತಂತ್ರ್ಯಯೋಧರು ಈಗ ಸುಮ್ಮನಿರುವುದೇಕೆ?

ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್‌ನ ಹೊಸ ಸರಕಾರ ಆರಂಭದಲ್ಲೇ ಅಗ್ಗದ ಮದ್ಯ ಮತ್ತು ಸಾರಾಯಿಯ 'ಮೋಹ'ಕ್ಕೆ ಬಿದ್ದಂತಿದೆ. ಮುಖ್ಯಮಂತ್ರಿಯಾದ ಮರುದಿನವೇ ಸಿದ್ಧರಾಮಯ್ಯನವರು 'ರಾಜ್ಯದ ಜನರಿಗೆ ಅಗ್ಗದ ಮದ್ಯ ತಯಾರಿಕೆ ಮತ್ತು ಪೂರೈಕೆ ಸಾಧ್ಯವಿದೆಯೆ ನೋಡ್ರಿ..' ಎಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದರು. ಮುಖ್ಯಮಂತ್ರಿಯವರ ಆ ಮಾತಿಗೆ ಸಾರ್ವಜನಿಕ ವಲಯದಿಂದ ಸಾಕಷ್ಟು ಟೀಕೆ– ಟಿಪ್ಪಣಿಗಳು ಬಂದ ಹಿನ್ನೆಲೆಯಲ್ಲಿ, 'ಅಗ್ಗದ ಮದ್ಯ ಪೂರೈಕೆಯ ತೀರ್ಮಾನ ಕೈಗೊಂಡಿಲ್ಲ. ಪರಿಶೀಲಿಸಲಷ್ಟೇ ಅಧಿಕಾರಿಗಳಿಗೆ ಹೇಳಿದ್ದೆ' ಎಂದು ಬಳಿಕ ಸ್ಪಷ್ಟನೆ ಬಂತು. ಇದೀಗ ರಾಜ್ಯದಲ್ಲಿ ಮದ್ಯದಂಗಡಿಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿಯವರು ಮಾತನಾಡಿದ್ದಾರೆ. ಅವರ ಮಾತಿಗೆ ಪೂರಕವಾಗಿ ಅಧಿಕಾರಿಗಳು, ಹೆಚ್ಚಿನ ಸಂಖ್ಯೆಯಲ್ಲಿ ಮದ್ಯದಂಗಡಿಗಳನ್ನು ತೆರೆದರೆ ಸರಕಾರದ ಬೊಕ್ಕಸಕ್ಕೆ ಹರಿದು ಬರುವ ಆದಾಯ ದುಪ್ಪಟ್ಟಾಗಲಿದೆ ಎಂದು ಲೆಕ್ಕ ಕೊಟ್ಟಿದ್ದಾರೆ. ಈ ಮಧ್ಯೆ 'ಸಾರಾಯಿ ಅಂಗಡಿಗಳನ್ನು ಮತ್ತೆ ತೆರೆಯುವ ಪ್ರಸ್ತಾಪವೂ ಸರಕಾರದ ಮುಂದಿದೆ' ಎಂಬ ಹೊಸ ಸುದ್ದಿ ಬಂದಿದೆ.

ಅಧಿಕಾರಕ್ಕೆ ಬಂದ ತಕ್ಷಣವೇ ಬಿಪಿಎಲ್ ಕಾರ್ಡ್‌ದಾರರಿಗೆ ಕೆ.ಜಿ ಗೆ ಒಂದು ರೂಪಾಯಿಯಂತೆ 30 ಕೆಜಿ ಅಕ್ಕಿ, 'ಅಹಿಂದ' ವರ್ಗದ ಸಾಲ ಮನ್ನಾ ಮುಂತಾಗಿ ಹಲವು ಜನಪ್ರಿಯ ಯೋಜನೆಗಳನ್ನು ಹೊಸ ಸರಕಾರ ಘೋಷಿಸಿದೆ. ಈ ಜನಪ್ರಿಯ ಯೋಜನೆಗಳಿಗೆ ಹೆಚ್ಚುವರಿ ಹಣ ಹೊಂದಿಸಬೇಕಾದ ಅನಿವಾರ್ಯತೆಯೂ ಮುಖ್ಯಮಂತ್ರಿಯ ಮುಂದಿದೆ. ಸಂಪನ್ಮೂಲ ಹೆಚ್ಚಿಸಬೇಕೆಂಬ ಅನಿವಾರ್ಯತೆ ಬಂದಾಗಲೆಲ್ಲ ಸರಕಾರದ ಕಣ್ಣು ಜನರ ದೌರ್ಬಲ್ಯಗಳ ಮೇಲೆಯೇ ಬೀಳುತ್ತದೆ. ಸಾರಾಯಿ, ಮದ್ಯ, ಸಿಗರೇಟು ಮುಂತಾದ ವ್ಯಸನವಸ್ತುಗಳ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವುದು ಸರಕಾರ ಕಂಡುಕೊಳ್ಳುವ ಸುಲಭ ಮಾರ್ಗ. ಕಾಂಗ್ರೆಸ್ ಸರಕಾರವೂ ಈಗ ಅಂತಹದ್ದೇ ದಾರಿಯನ್ನು ಹಿಡಿಯಹೊರಟಿದೆ. 'ರಾಜ್ಯದ ವಿವಿಧೆಡೆ ಅಕ್ರಮವಾಗಿ, ಲೈಸೆನ್ಸ್ ಇಲ್ಲದೆ ಮದ್ಯ ಮಾರಾಟ ನಡೆಸಲಾಗುತ್ತಿದೆ. ಇದನ್ನು ತಡೆದು ಬೊಕ್ಕಸಕ್ಕೆ ಆದಾಯ ಬರುವಂತೆ ಮಾಡಲು ಹೆಚ್ಚು ಬಾರ್‌ಗಳು ಮತ್ತು ಮದ್ಯದಂಗಡಿಗಳನ್ನು ತೆರೆಯಲಾಗುತ್ತದೆ' ಎಂದು ಸ್ವತಃ ಮುಖ್ಯಮಂತ್ರಿಯವರು ಸಮರ್ಥನೆ ನೀಡಿದ್ದಾರೆ.

ಆದರೆ ಈ 'ಮದ್ಯಮೋಹ'ವನ್ನು ಸರಕಾರ ತಾತ್ವಿಕವಾಗಿ ಹೇಗೆ ಸಮರ್ಥಿಸಿಕೊಳ್ಳುತ್ತದೆ ಎನ್ನುವುದು ಕುತೂಹಲಕರ ಸಂಗತಿ. ಗುಟ್ಕಾ ನಿಷೇಧ ಮಾಡುವ ಮೂಲಕ ಜನರ ಆರೋಗ್ಯದ ಬಗ್ಗೆ ಭಾರೀ ಕಾಳಜಿ ಪ್ರದರ್ಶಿಸಿದ ಸರಕಾರ, ಮದ್ಯ ಮಾರಾಟ ಹೆಚ್ಚಿಸುವ ಕ್ರಮಗಳನ್ನು ಹೇಗೆ ಸಮರ್ಥಿಸಿಕೊಳ್ಳುತ್ತದೆ? ಮದ್ಯ ಜನರ ಆರೋಗ್ಯವನ್ನು ಸುಧಾರಿಸುತ್ತದೆಯೆ? ಅದರಲ್ಲೂ ಜನರ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತದೆಂಬ ಕಾರಣಕ್ಕಾಗಿಯೇ ಹಿಂದಿನ ಸರಕಾರ ಸಾರಾಯಿ ಮಾರಾಟವನ್ನು ನಿಷೇಧಿಸಿತ್ತು. ಈಗ ಸಾರಾಯಿ ಮಾರಾಟವನ್ನೂ ಪುನಃ ಆರಂಭಿಸಿದರೆ ಸರಕಾರಕ್ಕೆ ಜನರ ಆರೋಗ್ಯದ ಬಗ್ಗೆ ಕಾಳಜಿ ಇಲ್ಲ ಎಂದಾಗುತ್ತದಲ್ಲವೆ? ಇದು ಸರಕಾರದ ಇಬ್ಬಂದಿತನದ ನೀತಿಯಲ್ಲವೆ?

ಸರಕಾರದ ಬೊಕ್ಕಸಕ್ಕೆ ಆದಾಯ ಹೆಚ್ಚಬೇಕೆಂದರೆ ಅನಗತ್ಯ ಆಡಳಿತ ವೆಚ್ಚಗಳನ್ನು ಕಡಿತ ಮಾಡಬೇಕು. ರಾಜಕಾರಣಿಗಳ ಪುನರ್ವಸತಿಗೆಂದೇ ರೂಪಿಸಲಾಗಿರುವ ನೂರಾರು ನಿಗಮ, ಮಂಡಳಿಗಳೆಂಬ ಬಿಳಿಯಾನೆಗಳು ನಮ್ಮಲ್ಲಿವೆ. ಇವೆಲ್ಲ ಬೊಕ್ಕಸಕ್ಕೆ ಅನಗತ್ಯ ಹೊರೆಯೆಂದು ಸರಕಾರಕ್ಕೆ ಏಕೆ ಅನ್ನಿಸುತ್ತಿಲ್ಲ? ಅಗ್ಗದ ಅಕ್ಕಿ, ಸಾಲ ಮನ್ನಾದಂತಹ ಜನಪ್ರಿಯ ಯೋಜನೆಗಳು ಚುನಾವಣೆಯಲ್ಲಿ ವೋಟು ಗಳಿಸಲು ನೆರವಾಗಬಹುದೇ ಹೊರತು ಉತ್ಪಾದಕತೆಯನ್ನು ಹೆಚ್ಚಿಸುವುದಿಲ್ಲ. ಸ್ವತಃ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿಯವರು ಕೃಷಿ, ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿಕೆ ಹೆಚ್ಚಿಸಿ, ಅಪಾರ ಉದ್ಯೋಗ ಸೃಷ್ಟಿಯತ್ತ ಗಮನ ಹರಿಸಬೇಕಿತ್ತು. ಆದರೆ ಮದ್ಯ, ಸಾರಾಯಿಯ ಹರಿವು ಹೆಚ್ಚಿಸುವ ಕುರಿತೇ ಅತ್ಯುತ್ಸಾಹದಿಂದ ಮಾತನಾಡುವುದು ನೋಡಿದರೆ ಮದ್ಯದ ಲಾಬಿಯ ಪ್ರಭಾವಕ್ಕೆ ಒಳಗಾಗಿರಬಹುದೆ ಎನ್ನುವ ಸಂಶಯ ಉಂಟಾಗುತ್ತದೆ.

ಸರಕಾರವೇ ಮುಂದೆ ನಿಂತು ಎಲ್ಲೆಡೆ ಬರೆಸಿರುವ 'ಹೆಂಡ ಸಾರಾಯಿಯ ಸಹವಾಸ, ಹೆಂಡತಿ ಮಕ್ಕಳು ಉಪವಾಸ' ಎಂಬ ಉಕ್ತಿಯನ್ನು ಮುಖ್ಯಮಂತ್ರಿಯವರಿಗೆ ಈಗ ನೆನಪಿಸುವವರು ಯಾರು? ಹೊಸ ಸರಕಾರಕ್ಕೆ ಅತ್ಯುತ್ಸಾಹದಿಂದ ಆಶೀರ್ವಾದ ಮಾಡಿದ ಹಿರಿಯ ಸಾಹಿತಿಗಳು, ಸ್ವಾತಂತ್ರ್ಯಯೋಧರು ಈಗ ಸುಮ್ಮನಿರುವುದೇಕೆ?

■ ಬಿ.ಎಂ.ಹನೀಫ್

